ಊ) ಮೇಲಿನ ಅಂಶಗಳು ನಿಜವಾಗಿದ್ದಲ್ಲಿ ಸರ್ಕಾರವು ಹರಿಜನ ಸೇವಾ ಸಂಘಕ್ಕೆ ಉಳಿದ ೧೫೧ ನಿವೇಶನಗಳನ್ನು ಬಿಡುಗಡೆ ಮಾಡಲು ತುರ್ತುಕ್ರಮವನ್ನು ತೆಗೆದುಕೊಳ್ಳುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಹೌದು.

ಆ) ಹೌದು.

ಇ) ಹೌದು.

ಈ) ಕೋರ್ಟಿನ ತಡೆಯಾಜ್ಞೆಯು ತೆರವಾಗಿದ್ದರೂ ಸಹ ಮೇಲಿನ ಅಕ್ಕಿತಿಮ್ಮನಹಳ್ಳಿ ಜಾಗದಲ್ಲಿ ಕೇವಲ ೧೩೨ ನಿವೇಶನಗಳನ್ನು ನಿರ್ಮಿಸಬಹುದಾಗಿದೆ ಮತ್ತು ಸಂಘಕ್ಕೆ ೧೮೯ ನಿವೇಶನಗಳನ್ನು ಕೊಡಬೇಕಾಗಿರುವುದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಉಳಿದ ೫೭ ನಿವೇಶನಗಳನ್ನು ಬೇರೆ ಯಾವ ಕಡೆಯಲ್ಲಿ ಮಾಡಬಹುದೆಂಬ ತಲಾತೆಯಲ್ಲಿದೆ.

ಉ) ಇಲ್ಲ.

ಊ) ಪ್ರಾಧಿಕಾರವು ಅಕ್ಕಿತಿಮ್ಮನಹಳ್ಳಿಯಲ್ಲಿ ೧೩೨ ನಿವೇಶನಗಳ ಪೈಕಿ ಉಳಿಯುವ ಉಳಿಕೆ ೯೪ ನಿವೇಶನಗಳನ್ನು ಬಿಡುಗಡೆ ಮಾಡಲು ಮತ್ತು ೫೭ ನಿವೇಶನಗಳನ್ನು ಇತರ ಬಡಾವಣೆಗಳಲ್ಲಿ ಹಂಚಲು ಕ್ರಮ ತೆಗೆದುಕೊಳ್ಳುತ್ತಿದೆ.

ಕಾರ್ಪೋರೇಷನ್ ಎಲ್ಲೆಯಲ್ಲಿರುವ ಬೆಟರ್‌ಮೆಂಟ್ ಶುಲ್ಕ ನಿಗದಿಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆಗಾಗಿ ಕಳುಹಿಸುವ ಬಗ್ಗೆ

೧೬೯೫. ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾರ್ಪೋರೇಷನ್ ಎಲ್ಲೆಯಲ್ಲಿರುವ ಬೆಟರ್‌ಮೆಂಟ್ ಶುಲ್ಕ ನಿಗದಿಪಡಿಸಿ ಲೇಔಟ್‌ಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆಗಾಗಿ ಕಾರ್ಪೋರೇಷನ್‌ರವರು ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೆ,

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿರುವ ಇಂತಹ ಪ್ರಸ್ತಾವನೆಗಳ ಸಂಖ್ಯೆ ಎಷ್ಟು,

ಇ) ಇಂತಹ ಕಾರ್ಪೋರೇಷನ್ ಎಲ್ಲೆಯಲ್ಲಿರುವ ಪ್ರದೇಶಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬರುವುದಿಲ್ಲವಾದುದರಿಂದ ಇಂತಹ ಪ್ರಸ್ತಾವನೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಲು ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಇಲ್ಲ

ಇ) ೧೯೭೬ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ ಪ್ರಕರಣ ೫೦೫ ಮತ್ತು ೧೯೬೯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯಿದೆ ಪ್ರಕರಣ೧೪ರ ಪ್ರಕಾರ ಬೆಂಗಳೂರು ಮಹಾ ನಗರಪಾಲಿಕೆಯು ಪರಿಮಿತಿಯಲ್ಲಿರುವ ಬಡಾವಣೆಗಳಿಗೆ ಬೆಟರ್‌ಮೆಂಟ್ ಶುಲ್ಕ ನಿಗದಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಮತಿ ಅವಶ್ಯಕವಿದೆ.

ಸಕಲೇಶಪುರದಲ್ಲಿ ಹೊಸ ಬಸ್ ನಿಲ್ದಾಣ ಮಾಡುವ ಬಗ್ಗೆ

೨೦೭೬. ಶ್ರೀ ಬಿ. ಡಿ. ಬಸವರಾಜ್ (ಸಕಲೇಶಪುರ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಬಸ್ ನಿಲ್ದಾಣಕ್ಕಾಗಿ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯಿಂದ ವಶಪಡಿಸಿಕೊಂಡಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಬಸ್ ನಿಲ್ದಾಣದ ಅಂದಾಜು ವೆಚ್ಚ ಎಷ್ಟು ಹಾಗೂ ಯಾವಾಗ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿ ವಸತಿ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಸಕಲೇಶಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾರ್ಯವನ್ನು ೮ ಲಕ್ಷ ರೂ. ಗಳ ಅಂದಾಜು ವೆಚ್ಚದಲ್ಲಿ ೧೯೮೬-೮೭ನೇ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

ಸೊನ್ನೇನಹಳ್ಳಿ, ಜಯನಗರ ಮತ್ತು ದೊಮ್ಮಲೂರಿನಲ್ಲಿ ಮಂಜೂರಾಗಿರುವ ನಿವೇಶನಗಳಿಗೆ ಸ್ವಾಧೀನ ಅರ್ಹತಾ ಪತ್ರ ನೀಡುವ ಬಗ್ಗೆ

೮೮೬. ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯವರು ಸೊನ್ನೇನಹಳ್ಳಿ, ಜಯನಗರ ಮತ್ತು ದೊಮ್ಮಲೂರು ಪ್ರದೇಶಗಳಲ್ಲಿ ನಿವೇಶನಗಳನ್ನು ಯಾವ ವರ್ಷದಲ್ಲಿ ಮಂಜೂರು ಮಾಡಿದೆ,

ಆ) ಇಂತಹ ಪ್ರಯೋಜನಗಳಿಗೆ (ಫಲಾನುಭವಿಗಳಿಗೆ) ಸ್ವಾಧೀನ ಅರ್ಹತ ಪತ್ರಗಳನ್ನು ನೀಡಲಾಗಿದೆಯೆ,

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು,

ಈ) ಎಲ್ಲಾ ಫಲಾನುಭವಿಗಳಿಗೆ ಯಾವಾಗ ಸ್ವಾಧೀನ ಪತ್ರಗಳನ್ನು ನೀಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಸೊನ್ನೇನಹಳ್ಳಿ — ೧೯೭೦
ಜಯನಗರ — ೧೯೫೦
ದೊಮ್ಮಲೂರು — ೧೯೭೮

ಆ) ಜಯನಗರ ಮತ್ತು ಸೊನ್ನೇನಹಳ್ಳಿ ನಿವೇಶನಗಳನ್ನು ಹಂಚಲಾಗಿದೆ ಮತ್ತು ಅವುಗಳು ಸಂಬಂಧಪಟ್ಟವರ ಸ್ವಾಧೀನದಲ್ಲಿವೆ, ದೊಮ್ಮಲೂರು ನಿವೇಶನಗಳನ್ನು ಇನ್ನೂ ಸ್ವಾಧೀನಕ್ಕೆ ಕೊಟ್ಟಿಲ್ಲ. ಕಾರಣ ಏನೆಂದರೆ ಸರ್ಕಾರದಿಂದ ಈ ಪ್ರಸ್ತಾವನೆಗೆ ಒಪ್ಪಿಗೆ ಇನ್ನೂ ಕೊಡಬೇಕಾಗಿದೆ.

ಇ) ದೊಮ್ಮಲೂರು ನಿವೇಶನಗಳ ಸ್ವಾಧೀನ ಪತ್ರಗಳನ್ನು ಸರ್ಕಾರದ ಮಂಜೂರಾತಿ ಬಂದ ಮೇಲೆ ಕೊಡಲಾಗುವುದು.

ಕಿರಿಯ ಸಹಾಯಕ, ಚಾಲಕ, ನಿರ್ವಾಹಕ, ಸಹಾಯಕ 'ಬಿ' ಮತ್ತು ಮೆಕ್ಯಾನಿಕ್ ಹುದ್ದೆಗಳಿಗೆ ನೇಮಕಾತಿಗಳ ಬಗ್ಗೆ

೮೮೭. ಶ್ರೀ ಎ. ಎಂ ಇಂಡಸಗೇರಿ.—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಿರಿಯ ಸಹಾಯಕ, ಚಾಲಕ, ನಿರ್ವಾಹಕ ಸಹಾಯಕ 'ಬಿ' ಮತ್ತು ಮೆಕ್ಯಾನಿಕ್ ಹುದ್ದೆಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ನೇ ಸಾಲಿನಲ್ಲಿ ನೇಮಕಾತಿಗಳನ್ನು ಮಾಡಲ್ಪಟ್ಟಿದೆಯೇ ?

ಆ) ಹಾಗಿದ್ದಲ್ಲಿ, ಜಾಹಿರಾತುಗೊಳಿಸಿದ ಒಟ್ಟು ಹುದ್ದೆಗಳ ಸಂಖ್ಯೆ, ಆಯ್ಕೆಗೊಂಡ ಅಭ್ಯರ್ಥಿಗಳ ಸಂಖ್ಯೆ ಮತ್ತು ಮುಸ್ಲೀಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗ ಗುಂಪುಗಳಲ್ಲಿ ಆಯ್ಕೆಗೊಂಡಿರುವ ಒಟ್ಟು ಸಂಖ್ಯೆಯನ್ನು ಮೇಲ್ಕಂಡ ೩ ವರ್ಷಗಳಿಗೆ ವಿಭಾಗವಾರು ಒದಗಿಸಿ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿ ವಸತಿ ಮಂತ್ರಿಗಳು).—

ಅ) ಹೌದು. ಕಿರಿಯ ಸಹಾಯಕರ ಹುದ್ದೆಗಳನ್ನು ಬಿಟ್ಟು.

ಆ) ವಿವರಗಳನ್ನು 'ಅನುಬಂದ'ದಲ್ಲಿ ಕೊಡಲಾಗಿದೆ.